# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 06-03-2023ರ ಸೋಮವಾರದಂದು ಪೂರ್ವಾಹ್ನ 11.30 ಗಂಟೆಗೆ ನಡೆದ "ವಿಶೇಷ ಸಿಂಡಿಕೇಟ್ ಸಭೆ"ಯ ನಡವಳಿಗಳು.**

**ಉಪಸ್ಥಿತರು:**

| | | |
|---|---|---|
| 1. | ಪ್ರೊ. ಮುಝಾಫರ್ ಹೆಚ್. ಅಸ್ಸಾದಿ | ಕುಲಪತಿ (ಪ್ರಭಾರ) ಹಾಗೂ ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಶ್ರೀ ಲಕ್ಷ್ಮಣ್ ಅಯ್ಯಪ್ಪ ಕುಲಗೋಡ್ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3. | ಪ್ರೊ. ಜಿ. ವೆಂಕಟೇಶ್ ಕುಮಾರ್ | ಸದಸ್ಯರು |
| 4. | ಶ್ರೀಮತಿ ವೈ.ಕೆ. ಪವಿತ್ರ | ಸದಸ್ಯರು |
| 5. | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 6. | ಡಾ. ಚೈತ್ರ ನಾರಾಯಣ | ಸದಸ್ಯರು |
| 7. | ಡಾ. ನಿರ್ಮಲ ಹೆಚ್.ಎಂ. | ಸದಸ್ಯರು |
| 8. | ಶ್ರೀಮತಿ ಸೌಮ್ಯ ಈರಪ್ಪ ಕೆ. | ಸದಸ್ಯರು |
| 9. | ಡಾ. ಜಯಶಂಕರ್ ಎನ್. | ಸದಸ್ಯರು |
| 10. | ಪ್ರೊ. ಎ.ಪಿ. ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 11. | ಶ್ರೀಮತಿ ಶೈಲಜ ವಿ.ಆರ್., ಕೆಎಎಸ್ | ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ |
| 12. | ಡಾ. ಸಂಗೀತ ಗಜಾನನ ಭಟ್, ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |

**ಅನುಪಸ್ಥಿತರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಡಾ. ಎಸ್.ಹೆಚ್. ಗಂಗೇಗೌಡ

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ಮೊದಲಿಗೆ, ಹೊಸದಾಗಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ (ಪ್ರಭಾರ)ಗಳಾಗಿ ಅಧಿಕಾರವನ್ನು ವಹಿಸಿಕೊಂಡಿರುವ ಪ್ರೊ. ಮುಝಾಫರ್ ಹೆಚ್. ಅಸ್ಸಾದಿ, ಪ್ರಾಧ್ಯಾಪಕರು ಹಾಗೂ ಡೀನರು, ಕಲಾ ನಿಕಾಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು ಶ್ರೀಮತಿ ಸೌಮ್ಯ ಈರಪ್ಪ ಕೆ., ಪ್ರಾಂಶುಪಾಲರು, ಶೇಷಾದ್ರಿಪುರಂ ಕಾಲೇಜು, ಹೆಬ್ಬಾಳು, ಮೈಸೂರು ಇವರುಗಳನ್ನು ಸಭೆಗೆ ಸ್ವಾಗತಿಸಿದರು.

ನಂತರ, ಪ್ರೊ. ಹೆಚ್. ರಾಜಶೇಖರ್, ಪ್ರಾಧ್ಯಾಪಕರು ಹಾಗೂ ಡೀನರು, ವಾಣಿಜ್ಯ ನಿಕಾಯ, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ವಿಶ್ವವಿದ್ಯಾನಿಲಯದ (ಪ್ರಭಾರ) ಕುಲಪತಿಗಳಾಗಿ ಹಾಗೂ ಸಿಂಡಿಕೇಟ್ ಸದಸ್ಯರಾಗಿ ಸಲ್ಲಿಸಿರುವ ಸೇವೆಯನ್ನು ಮತ್ತು ಸಿಂಡಿಕೇಟ್ ಸದಸ್ಯರಾದ ಡಾ. ಜಿ. ಗೋವಿಂದರಾಜು, ಪ್ರಾಂಶುಪಾಲರು, ಮೈನಾರಿಟಿ ಕಾಲೇಜು, ವಿಜಯನಗರ, ಮೈಸೂರು ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ಮಾನ್ಯ ಕುಲಪತಿಯವರ ಅನುಮತಿಯ ಮೇರೆಗೆ ಸಭೆಯಲ್ಲಿ ಕಾರ್ಯಸೂಚಿಯನ್ನು ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| **ವಿಶೇಷ ಸಭೆ 2023/01** | ವಿಶ್ವವಿದ್ಯಾನಿಲಯದ ವಾರ್ಷಿಕ ಘಟಿಕೋತ್ಸವದ ಸಮಾರಂಭದಲ್ಲಿ ಖಾದಿ ಹಾಗೂ ಕೈಮಗ್ಗ ಬಟ್ಟೆಗಳಿಂದ ತಯಾರಿಸಿದ ಉಡುಪು ಅಳವಡಿಸುವ ಬಗೆಗೆ. |
| | ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಘಟಿಕೋತ್ಸವದ ಸಮಾರಂಭದಲ್ಲಿ ಖಾದಿ ಹಾಗೂ ಕೈಮಗ್ಗ ಬಟ್ಟೆಗಳಿಂದ ತಯಾರಿಸಿದ ಉಡುಪು ಧರಿಸುವ ಪ್ರಸ್ತಾವನೆ ಬಗ್ಗೆ ಉಪಸಮಿತಿಯ ವರದಿಯಂತೆ ಉಡುಪುಗಳನ್ನು ಬದಲಾವಣೆ ಮಾಡಲು ಹಾಗೂ ಅಧಿನಿಯಮದ ಸಮಿತಿಯು ಹಾಲಿ ಇರುವ ವಿಶ್ವವಿದ್ಯಾನಿಲಯದ ಘಟಿಕೋತ್ಸವದ ಅಧಿನಿಯಮದ Section 14ಕ್ಕೆ ಪರಿಷ್ಕರಣೆ ಮಾಡುವ ಸಂಬಂಧ ಮಾನ್ಯ ಸದಸ್ಯರುಗಳು ಈ ಕೆಳಕಂಡಂತೆ ಮಾರ್ಪಾಡು ಮಾಡಲು ಶಿಫಾರಸ್ಸು ಮಾಡಿದರು.<br>* ಕುಲಸಚಿವ, ಕುಲಸಚಿವ (ಪರೀಕ್ಷಾಂಗ) ಮತ್ತು ಹಣಕಾಸು ಅಧಿಕಾರಿ ಅವರುಗಳು ಒಂದೇ ರೀತಿಯ ಉಡುಪುಗಳನ್ನು ಧರಿಸುವುದು.<br>* Every Degree Certificate shall bear the signature of the Vice-Chancellor.<br>* ವಿಶ್ವವಿದ್ಯಾನಿಲಯದ ಘಟಿಕೋತ್ಸವದ ಅಧಿನಿಯಮದ Section 14ಕ್ಕೆ ಪರಿಷ್ಕರಣೆ ಮಾಡಿರುವುದನ್ನು ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸುವುದು. |
| **ತೀರ್ಮಾನ** | ಉಪ ಸಮಿತಿಯು ಸಲ್ಲಿಸಿರುವ ವರದಿಯಂತೆ ವಿಶ್ವವಿದ್ಯಾನಿಲಯದ ಘಟಿಕೋತ್ಸವದ ಅಧಿನಿಯಮದ Section 14ಕ್ಕೆ ಪರಿಷ್ಕರಣೆ ಮಾಡಿ ಸಲ್ಲಿಸಿರುವ ಅಧಿನಿಯಮಕ್ಕೆ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿರುವ ಅಂಶವನ್ನು ಸೇರ್ಪಡೆ ಮಾಡಿಕೊಂಡು ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಲು ಸಭೆಯು ಶಿಫಾರಸ್ಸು ಮಾಡಿತು ಹಾಗೂ 103ನೇ ವಾರ್ಷಿಕ ಘಟಿಕೋತ್ಸವದ ಮುನ್ನ ಮಾನ್ಯ ಕುಲಾಧಿಪತಿಗಳಿಂದ ಅಂಕಿತ ದೊರೆತರೆ ಖಾದಿ ಹಾಗೂ ಕೈಮಗ್ಗ ಬಟ್ಟೆಗಳಿಂದ ತಯಾರಿಸಿದ ಉಡುಪುಗಳನ್ನು ಕಾಲಾವಕಾಶವನ್ನು ಆಧರಿಸಿ ಅನುಷ್ಠಾನಗೊಳಿಸುವುದು ಅಥವಾ ಮುಂದಿನ ವಾರ್ಷಿಕ ಘಟಿಕೋತ್ಸವದಲ್ಲಿ ಅನುಷ್ಠಾನಗೊಳಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. |
| **ವಿಶೇಷ ಸಭೆ 2023/02** | ಕುರುಬಾರಹಳ್ಳಿಯ ರೀ ಸರ್ವೇ ನಂ.5ರ 22 ಎಕರೆ ಜಮೀನಿನಲ್ಲಿ ಪ್ಲಾನಿಟೋರಿಯಂ ನಿರ್ಮಾಣ ಮಾಡಲು 03 ಎಕರೆ ಜಮೀನನ್ನು ನೀಡುವ ಬಗ್ಗೆ. |
| | ಮಾನ್ಯ ಕುಲಸಚಿವರು ಮಾತನಾಡಿ, ಕುರುಬಾರಹಳ್ಳಿಯ ರೀ ಸರ್ವೇ ನಂ.5ರ 22 ಎಕರೆ ಜಮೀನಿನಲ್ಲಿ ಸೈನ್ಸ್ ಪಾರ್ಕ್‌ಗೆ 07 ಎಕರೆ ಜಮೀನನ್ನು ಮತ್ತು ಪ್ಲಾನಿಟೋರಿಯಂ ನಿರ್ಮಾಣ ಮಾಡಲು 03 ಎಕರೆ ಜಮೀನನ್ನು ನೀಡಲು ಈಗಾಗಲೇ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಒಡಂಬಡಿಕೆ ಮಾಡಿಕೊಂಡರೂ ಸದರಿ 10 ಎಕರೆ ಜಮೀನು ವಿಶ್ವವಿದ್ಯಾನಿಲಯದ ಸ್ವಾಧೀನದಲ್ಲಿದ್ದು, ಸಂಪೂರ್ಣ ಭೂಮಿಯನ್ನು ವರ್ಗಾಯಿಸಿರುವುದಿಲ್ಲ. ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ವಾಕ್ ಮತ್ತು ಶ್ರವಣ ಸಂಸ್ಥೆ ಪ್ರಾರಂಭಿಸಲು ಕುರುಬಾರಹಳ್ಳಿಯ ಸರ್ವೇ ನಂ.4ರಲ್ಲಿ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಜಾಗವನ್ನು ನೀಡಿರುತ್ತಾರೆ. ಅಲ್ಲಿ ಇನ್ನು ಜನವಸತಿ ಇರುವುದಿಲ್ಲ ಹಾಗೂ ವಾಕ್ ಮತ್ತು ಶ್ರವಣ ಸಂಸ್ಥೆ ಪ್ರಾರಂಭಿಸಿದರೆ ಸಾರ್ವಜನಿಕರಿಗೆ ಅನುಕೂಲವಾಗುವುದಿಲ್ಲವೆಂದು ಮೈಸೂರು ವಿಶ್ವವಿದ್ಯಾನಿಲಯದೊಂದಿಗೆ ಹಲವಾರು ಪತ್ರ ವ್ಯವಹಾರಗಳು ನಡೆದು ಅಂತಿಮವಾಗಿ ಮಾನಸಗಂಗೋತ್ರಿಯ ಆವರಣದಲ್ಲಿ |

| | |
|---|---|
| | ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ 1967ರಲ್ಲಿ 32 ಎಕರೆ ಜಮೀನನ್ನು ವಾಕ್ ಮತ್ತು ಶ್ರವಣ ಸಂಸ್ಥೆ ಪ್ರಾರಂಭಿಸಲು ಮಾನ್ಯ ರಾಷ್ಟ್ರಪತಿಗಳಿಗೆ ನೀಡಲಾಯಿತು. ಇದಕ್ಕೆ ಬದಲಾಗಿ ರಾಷ್ಟ್ರಪತಿಗಳು ಹೊಂದಾಣಿಕೆಯ ವಿನಿಮಯ (matching exchange) ಅನ್ವಯ ಕುರುಬಾರಹಳ್ಳಿಯ ರೀ ಸರ್ವೇ ನಂ.5ರಲ್ಲಿ 22 ಎಕರೆ ಜಮೀನನ್ನು 99 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮೈಸೂರು ವಿಶ್ವವಿದ್ಯಾನಿಲಯದ ಹೆಸರಿಗೆ ವರ್ಗಾಯಿಸಲಾಗಿರುತ್ತದೆ ಹಾಗೂ ದಿನಾಂಕ: 04-03-2023ರಂದು ಮಾನ್ಯ ಕುಲಪತಿಗಳು ಹಾಗೂ Indian Institute of Astrophysics ಅಧ್ಯಕ್ಷರು, ಇಸ್ರೋದ ಹಿಂದಿನ ಅಧ್ಯಕ್ಷರಾದ ಶ್ರೀ ಎ.ಎಸ್. ಕಿರಣ್‌ಕುಮಾರ್, ವೈಜ್ಞಾನಿಕ ಸಲಹೆಗಾರರು ಮತ್ತು ಅವರ ತಂಡದ ಸಮ್ಮುಖದಲ್ಲಿ ಪ್ಲಾನಿಟೋರಿಯಂ ನಿರ್ಮಾಣ ಮಾಡಲು ಒಡಂಬಡಿಕೆ ಮಾಡಿಕೊಂಡಿದ್ದು, ಇದು ವಿಶ್ವವಿದ್ಯಾನಿಲಯದ ಸ್ವಾಧೀನದಲ್ಲಿದ್ದು, ಸಂಪೂರ್ಣ ಭೂಮಿಯನ್ನು ವರ್ಗಾಯಿಸಿರುವುದಿಲ್ಲ. 22 ಎಕರೆ ಜಮೀನನ್ನು 99 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೀಡಿರುವುದರಲ್ಲಿ, ಈಗಾಗಲೇ 52 ವರ್ಷಗಳು ಪೂರ್ಣಗೊಂಡಿರುತ್ತದೆ. ಈಗಿನ ಕೇಂದ್ರ ಹಣಕಾಸು ಸಚಿವರಾಗಿರುವ ಸನ್ಮಾನ್ಯ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಸಂಸತ್‌ನ ಸದಸ್ಯರ ಅನುದಾನದಿಂದ ಪ್ಲಾನಿಟೋರಿಯಂಗೆ 5.00 ಕೋಟಿ ಅನುದಾನ ನೀಡಿರುತ್ತಾರೆ. ಇದೊಂದು ದೊಡ್ಡ ಯೋಜನೆಯಾಗಿದ್ದು ಒಟ್ಟು 83.00 ಕೋಟಿ ಅಂದಾಜು ಮೊತ್ತದ ಯೋಜನೆಯಾಗಿರುತ್ತದೆ. ಆದ್ದರಿಂದ UoM ಮತ್ತು AIISHರವರ ನಡುವೆ ಮಾಡಿಕೊಂಡಿರುವ ಲೀಸ್‌ನಲ್ಲಿ sub-lease ಮಾಡುವ ಅವಕಾಶವಿದ್ದಲ್ಲಿ, 3 ಎಕರೆ ಜಮೀನನ್ನು sub-lease ಮಾಡಿಕೊಟ್ಟಲ್ಲಿ ಯೋಜನೆಯ ಅನುಷ್ಠಾನಕ್ಕೆ ಅನುಕೂಲವಾಗುತ್ತದೆ ಎಂದು ತಿಳಿಸಿರುತ್ತಾರೆ. 03 ಎಕರೆ ಜಮೀನನ್ನು sub-lease ಮಾಡುವುದರಿಂದ ವಿಶ್ವವಿದ್ಯಾನಿಲಯಕ್ಕೆ, ವಿದ್ಯಾರ್ಥಿಗಳಿಗೆ ಹಾಗೂ ಇಡೀ ಮೈಸೂರಿಗೆ ಅನುಕೂಲವಾಗುವುದರಿಂದ ತಮ್ಮ ವ್ಯಾಪ್ತಿಯಲ್ಲಿರುವ ಜಮೀನನ್ನು ಜಿಲ್ಲಾಡಳಿತಕ್ಕೆ ವರ್ಗಾಯಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರು ಕುಲಪತಿಗಳಿಗೆ ಪತ್ರ ಬರೆದಿರುತ್ತಾರೆ. ಸದರಿ ಜಮೀನು ರಾಷ್ಟ್ರಪತಿಗಳ ಹೆಸರಿನಲ್ಲಿರುವುದರಿಂದ ವಿಶ್ವವಿದ್ಯಾನಿಲಯವು ನಿಯಮಾನುಸಾರ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ ಪೂರ್ವಾನುಮತಿ ಪಡೆದ ನಂತರವೇ ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.<br><br>ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಮಾಡಿಕೊಟ್ಟಿರುವ ಲೀಸ್ ಅನ್ನು sub-lease ಮಾಡಿಕೊಡಬೇಕೆಂದು ತಿಳಿಸಿರುವುದರಿಂದ ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ಮುಂದುವರೆಯಬೇಕೆಂದು ತಿಳಿಸಿದರು.<br><br>ಡಾ. ಚೈತ್ರ ನಾರಾಯಣ ಅವರು ಮಾತನಾಡಿ, ವಿದ್ಯಾರ್ಥಿಗಳಿಗೆ ಹಾಗೂ ಇಡೀ ಮೈಸೂರಿಗೆ ಅನುಕೂಲವಾಗುವುದಾದರೆ ವಿಶ್ವವಿದ್ಯಾನಿಲಯವು ಕ್ರಮ ತೆಗೆದುಕೊಳ್ಳಬಹುದೆಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಮಾನಸಗಂಗೋತ್ರಿಯಲ್ಲಿರುವ ಜಯಲಕ್ಷ್ಮಿ ವಿಲಾಸ ಮಹಲಿನಲ್ಲಿರುವ ವಸ್ತುಸಂಗ್ರಹಾಲಯ ಹಾಗೂ ಮಾನವಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸೇರಿದ ವಸ್ತುಸಂಗ್ರಹಾಲಯವು ಸಹ ಸಂಪೂರ್ಣವಾಗಿ ವಿಶ್ವವಿದ್ಯಾನಿಲಯದ ಸುಪರ್ದಿನಲ್ಲಿಯೇ ಇರುತ್ತದೆಂದು ತಿಳಿಸುತ್ತಾ ಜಯಲಕ್ಷ್ಮಿ ವಿಲಾಸದ ಜಮೀನಿನ/ಭೂಮಿಯ ಹಕ್ಕು ಮೈಸೂರು ವಿಶ್ವವಿದ್ಯಾನಿಲಯದಲ್ಲೇ ಉಳಿಸಿಕೊಳ್ಳಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು ಹಾಗೂ ಕುರುಬಾರಹಳ್ಳಿಯ ರೀ ಸರ್ವೇ ನಂ.5ರ |

| | |
|---|---|
| | ವಿಶ್ವವಿದ್ಯಾನಿಲಯದ ಜಮೀನಿನಲ್ಲಿ ಪ್ಲಾನಿಟೋರಿಯಂ ನಿರ್ಮಾಣ ಮಾಡಲು 03 ಎಕರೆ ಜಮೀನನ್ನು Indian Institute of Astrophysics ಅವರಿಗೆ sub-lease ಮಾಡುವ ಸಂಬಂಧ ಕಾನೂನು ಅಭಿಪ್ರಾಯ ಪಡೆದು ಸರ್ಕಾರಕ್ಕೆ ಪತ್ರ ಬರೆಯಲಾಗುವುದೆಂದು ಸಭೆಯಲ್ಲಿ ತಿಳಿಸಿದರು. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 3ರ (3) ಮತ್ತು (4)ರ ಪ್ರಕಾರ ವಿಶ್ವವಿದ್ಯಾನಿಲಯದ ಜಮೀನನ್ನು ಇತರರಿಗೆ ಪರಬಾರೆ/ಲೀಸ್ ನೀಡಬೇಕಾದ್ದಲ್ಲಿ ರಾಜ್ಯ ಸರ್ಕಾರದ ಪೂರ್ವಾನುಮೋದನೆ ಪಡೆಯಬೇಕಾಗಿರುವುದರಿಂದ, ಕುರುಬಾರಹಳ್ಳಿಯ ರೀ ಸರ್ವೇ ನಂ.5ರ ವಿಶ್ವವಿದ್ಯಾನಿಲಯದ ಜಮೀನಿನಲ್ಲಿ ಪ್ಲಾನಿಟೋರಿಯಂ ನಿರ್ಮಾಣ ಮಾಡಲು 03 ಎಕರೆ ಜಮೀನನ್ನು Indian Institute of Astrophysics ಅವರಿಗೆ sub-lease ಮಾಡುವ ಸಂಬಂಧ ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ಅದರಂತೆ, ರಾಜ್ಯ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

ಪ್ರೊ. ಜಿ. ವೆಂಕಟೇಶ್‌ಕುಮಾರ್, ಪ್ರಾಧ್ಯಾಪಕರು, ಮನಃಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಸಿಂಡಿಕೇಟ್ ಸದಸ್ಯತ್ವದ ಅವಧಿಯು ದಿನಾಂಕ: 09-03-2023ರಂದು ಹಾಗೂ ಶ್ರೀಮತಿ ಪವಿತ್ರ ವೈ.ಕೆ, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಸಿಂಡಿಕೇಟ್ ಅವಧಿಯು ದಿನಾಂಕ: 16-03-2023ರಂದು ಮುಕ್ತಾಯಗೊಳ್ಳುತ್ತಿರುವುದರಿಂದ ಇವರಿಗೆ ಹೂ ಗುಚ್ಛ ನೀಡಿ ಶ್ಲಾಘಿಸಲಾಯಿತು.

1) **ಮೈಸೂರು ವಿಶ್ವವಿದ್ಯಾನಿಲಯದ 103ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಬಗ್ಗೆ.**

ಮಾನ್ಯ ಕುಲಪತಿಗಳು ಮಾತನಾಡಿ, 103ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಈ ಕೆಳಕಂಡ ಮೂರು ಮುಖ್ಯ ವಿಷಯಗಳ ಬಗ್ಗೆ ಸಭೆಯಲ್ಲಿ ನಿರ್ಧರಿಸಬೇಕಾಗುತ್ತದೆ ಎಂದು ತಿಳಿಸಿದರು.

1) **ಮುಖ್ಯ ಅತಿಥಿಗಳನ್ನು ಆಹ್ವಾನಿಸುವುದು ;**
ಘಟಿಕೋತ್ಸವ ಭಾಷಣಕ್ಕೆ ಮುಖ್ಯ ಅತಿಥಿಗಳಾಗಿ (1) ಸರ್ವೋಚ್ಛ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀಮತಿ ಬಿ.ವಿ.ನಾಗರತ್ನ, (2) ಭಾರತೀಯ ವಿದ್ವಾಂಸೆ, ಪರಿಸರ ಕಾರ್ಯಕರ್ತೆ ಹಾಗೂ ಆಹಾರ ಸಾರ್ವಭೌಮತ್ವದ ವಕೀಲೆ ಡಾ. ವಂದನಾ ಶಿವ, (3) ಭಾರತೀಯ ಶೈಕ್ಷಣಿಕ ಮತ್ತು ಪ್ರಸ್ತುತ ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯ (ಜೆಎನ್‌ಯು), ನವದೆಹಲಿಯ ಕುಲಪತಿಯವರಾದ ಪ್ರೊ. ಶಾಂತಿಶ್ರೀ ಧೂಳಿಪುಡಿ ಪಂಡಿತ್, (4) ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದ ಅಧ್ಯಕ್ಷ ಶ್ರೀ ಜಗದೀಶ್‌ಕುಮಾರ್ ಹಾಗೂ (5) ಆಂಧ್ರಪ್ರದೇಶದ ರಾಜ್ಯಪಾಲರಾದ ಗೌರವಾನ್ವಿತ ಶ್ರೀ ಸಯ್ಯದ್ ಅಬ್ದುಲ್ ನಾಜೀರ್ ಇವರುಗಳಲ್ಲಿ ಒಬ್ಬರನ್ನು ಆಯ್ಕೆ ಮಾಡಿ ರಾಜ್ಯಪಾಲರಿಗೆ ಪಟ್ಟಿಯನ್ನು ಕಳುಹಿಸುವುದು

2) **ದಿನಾಂಕ ನಿಗದಿಗೊಳಿಸುವುದು;**
ಮಾರ್ಚ್ 23 ರಿಂದ 25 ರೊಳಗೆ ಮಾನ್ಯ ಕುಲಾಧಿಪತಿಗಳು ಸೂಚಿಸುವ ಒಂದು ದಿನಾಂಕದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ 103ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು ಆಯೋಜಿಸುವುದು.

3) **ಗೌರವ ಡಾಕ್ಟರೇಟ್‌ಗೆ ಹೆಸರುಗಳನ್ನು ಶಿಫಾರಸ್ಸು ಮಾಡುವುದು;**
ಗೌರವ ಡಾಕ್ಟರೇಟ್‌ಗೆ ಕ್ರೀಡಾ ಕ್ಷೇತ್ರದಿಂದ ಶ್ರೀ ಜಾವಗಲ್ ಶ್ರೀನಾಥ್, ರಾಜಕೀಯ ಕ್ಷೇತ್ರದಿಂದ ಮುತ್ಸದಿ ಶ್ರೀ ಎಸ್.ಎಂ.ಕೃಷ್ಣ, ಸಾಹಿತ್ಯ ಕ್ಷೇತ್ರದಿಂದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಆರೋಗ್ಯ ಕ್ಷೇತ್ರದಿಂದ ಡಾ. ಖಾದರ್ ಅಲಿ, ಕನ್ನಡಪರ ಹೋರಾಟಗಾರ, ಹಿರಿಯ ಸಮಾಜವಾದಿ ಆಗಿದ್ದ ದಿ.ಪ.ಮಲ್ಲೇಶ್, ಮಾಧ್ಯಮ ಕ್ಷೇತ್ರದಿಂದ

ಪತ್ರಿಕೋದ್ಯಮಿ ಶ್ರೀ ಕೆ.ಬಿ.ಗಣಪತಿ, ವೈದ್ಯಕೀಯ ವಿಜ್ಞಾನ ಕ್ಷೇತ್ರದಿಂದ ಪ್ರೊ. ಪಿ.ಎಸ್.ಶಂಕರ್, ಸಾಂಸ್ಕೃತಿಕ ಕ್ಷೇತ್ರದಿಂದ ಶ್ರೀ ವೈ.ಕೆ.ಮುದ್ದುಕೃಷ್ಣ, ಬುಡಕಟ್ಟು ಪ್ರತಿಭೆ ಶ್ರೀಮತಿ ಮಾಸ್ತಮ್ಮ ಅವರ ಹೆಸರುಗಳನ್ನು ಶಿಫಾರಸ್ಸು ಮಾಡಲಾಯಿತು.

ಈ ಸಂಬಂಧ ಸಿಂಡಿಕೇಟ್ ಸದಸ್ಯರು ಹೆಸರುಗಳನ್ನು ಪ್ರಸ್ತಾಪ ಮಾಡಿರುವುದನ್ನು ಅವಗಾಹಿಸಿ, ಗೌರವ ಡಾಕ್ಟರೇಟ್‌ಗೆ ಶಿಫಾರಸ್ಸು ಮಾಡಿರುವ ಹಲವರ ಹೆಸರುಗಳನ್ನು ರಾಜ್ಯಪಾಲರು ಒಪ್ಪಬಹುದು ಅಥವಾ ಬದಲಿಸಬಹುದು. ಆದರೆ, ಆಯಾಯ ಕ್ಷೇತ್ರದ ಸಾಧಕರನ್ನು ಗುರುತಿಸಿ ಶಿಫಾರಸ್ಸು ಮಾಡುವುದು ಸೂಕ್ತ. ಪಟ್ಟಿಯನ್ನು ಕಳುಹಿಸುವಾಗ ಗಮನಾರ್ಹ ಸಾಧನೆ ಮಾಡಿದವರ ಹೆಸರನ್ನು ಕಳುಹಿಸಬೇಕೆಂದು ಒಮ್ಮತದ ಸಲಹೆ ನೀಡಿದರು. ಮಾನ್ಯ ಸಿಂಡಿಕೇಟ್ ಸದಸ್ಯರುಗಳ ಸಲಹೆಯನ್ನು ಸಮ್ಮತಿಸಿದ ಮಾನ್ಯ ಕುಲಪತಿಗಳು ಮಾತನಾಡಿ, ಅಂತಿಮವಾಗಿ 4-5 ಹೆಸರುಗಳನ್ನು ಆಯ್ಕೆ ಮಾಡಿ ಸಿಂಡಿಕೇಟ್‌ನ ಪರವಾಗಿ ಶಿಫಾರಸ್ಸು ಮಾಡುವ ವಿವೇಚನಾಧಿಕಾರವನ್ನು ಕುಲಪತಿಗಳಿಗೆ ಬಿಡಬೇಕೆಂದು ತಿಳಿಸಿದರು.

ಅಂತಿಮವಾಗಿ, ಮೈಸೂರು ವಿಶ್ವವಿದ್ಯಾನಿಲಯದ 103ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಬಗ್ಗೆ ಚರ್ಚಿಸಲಾದ ಮೂರು ಮುಖ್ಯ ವಿಷಯಗಳನ್ನು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**2) <u>ಆರ್ಕಿಟೆಕ್ಚರ್ ವಿಭಾಗದ ಅಂಕಪಟ್ಟಿಯ ಬಗ್ಗೆ.</u>**

<u>ಮಾನ್ಯ ಕುಲಪತಿ</u>ಯವರು ಮಾತನಾಡಿ, ಆರ್ಕಿಟೆಕ್ಚರ್ ವಿಭಾಗದ ಅಂಕಪಟ್ಟಿ ಹಾಗೂ ಪದವಿ ಪ್ರಮಾಣಪತ್ರಗಳನ್ನು 2018 ರಿಂದ ಅಂದರೆ ಸುಮಾರು ಐದು ವರ್ಷದಿಂದ ನೀಡಿರುವುದಿಲ್ಲ. ತಡವಾಗಿರುವುದಕ್ಕೆ ಕಾರಣವೇನೆಂದು ಕುಲಸಚಿವ (ಪರೀಕ್ಷಾಂಗ) ರವರನ್ನು ಕೇಳಿದರು.

<u>ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ</u> – ಈ ಸಂಬಂಧ Dean, BoE chairman and DOS Chairman ವಾಟ್ಸಪ್ ಗ್ರೂಪ್‌ಗಳಲ್ಲಿ ಹಾಕಿದ್ದೇನೆ. ಇದರಲ್ಲಿ ವಿಭಾಗದ ಅಧ್ಯಕ್ಷರುಗಳ ಜವಾಬ್ದಾರಿಯು ಇರುತ್ತದೆ. ಅಧ್ಯಯನ ಮಂಡಳಿಯ ನಿಯಮ ಹಾಗೂ ರೆಗ್ಯುಲೇಷನ್‌ನಲ್ಲಿ ತಿಳಿಸಿರುವ ನಮೂನೆಯಂತೆ ಅಂಕಪಟ್ಟಿಗಳನ್ನು ಪ್ರಿಂಟ್ ಮಾಡಲಾಗುತ್ತದೆ. ನಾನು ಕುಲಸಚಿವ (ಪರೀಕ್ಷಾಂಗ)ರಾದ ದಿನದಿಂದಲೂ ಆರ್ಕಿಟೆಕ್ಚರ್ ವಿಭಾಗದಲ್ಲಿ ಸಮಸ್ಯೆಗಳಿವೆ. ಈ ಬಗ್ಗೆ ನಿರ್ದೇಶಕರು ಹಾಗೂ ಅಧ್ಯಾಪಕರುಗಳೊಂದಿಗೆ ಸಭೆ ನಡೆಸಿ, ಆ ವಿಭಾಗದಲ್ಲಿರುವ ಅನೇಕ ಸಮಸ್ಯೆಗಳನ್ನು ಬಗೆಹರಿಸಲಾಗಿದೆ. ವಿಭಾಗದ ಪತ್ರವನ್ನು ಪರೀಕ್ಷಾ ಶಾಖೆಗೆ ಕಳುಹಿಸುವ ಬದಲು ನೇರವಾಗಿ ಬಂದು ಅಥವಾ ನನ್ನ ಹೆಸರಿಗೆ ಕಳುಹಿಸಿದ್ದರೆ, ಪರೀಕ್ಷೆಗೆ ಸಂಬಂಧಿಸಿದ ಏನೇ ಸಮಸ್ಯೆ ಇದ್ದರೂ 1-2 ದಿನದಲ್ಲಿ ಬಗೆಹರಿಸಬಹುದು. ವಿಭಾಗದವರು ನಿಗದಿತ ನಮೂನೆಯಲ್ಲಿ $C_1$ ಮತ್ತು $C_2$ ಅಂಕಗಳನ್ನು ಕಳುಹಿಸುವುದು ತಡವಾದಾಗ ಮಾತ್ರ ಫಲಿತಾಂಶ ಪ್ರಕಟಣೆ ಹಾಗೂ ಅಂಕಪಟ್ಟಿ ಮುದ್ರಣವು ತಡವಾಗುತ್ತದೆ. ವಿಶ್ವವಿದ್ಯಾನಿಲಯದ ವತಿಯಿಂದ ಕಾಲೇಜು/ವಿಭಾಗಗಳಿಗೆ ವಿದ್ಯಾರ್ಥಿಗಳ ಅಂಕಪಟ್ಟಿಯನ್ನು ರವಾನಿಸಿರುತ್ತದೆ. ಪದವಿ ಪ್ರಮಾಣಪತ್ರ ನೀಡುವ ಬಗ್ಗೆ ವಾರ್ಷಿಕ ಘಟಿಕೋತ್ಸವದ ಮೊದಲೇ ಎಲ್ಲಾ ಕಾಲೇಜು/ವಿಭಾಗಗಳಿಗೆ ಸುತ್ತೋಲೆ ಹೊರಡಿಸಲಾಗುತ್ತದೆ. ಕಾಲೇಜು ಪ್ರಾಂಶುಪಾಲರು/ವಿಭಾಗದ ಅಧ್ಯಕ್ಷರುಗಳು Convocation Certificate Formನೊಂದಿಗೆ ಶುಲ್ಕ ಪಾವತಿಸಿರುವ ರಶೀದಿಯನ್ನು ನಿಗದಿತ ಅವಧಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದರೆ, ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ಪಡೆಯುವುದಕ್ಕೆ ಯಾವುದೇ ತೊಂದರೆಯಾಗುವುದಿಲ್ಲ. ಒಂದು ಕಾಲೇಜಿನವರು 2019ನೇ ಸಾಲಿನ ಪದವಿ ಪ್ರಮಾಣಪತ್ರವನ್ನು ಎರಡು ದಿನದ ಹಿಂದೆ ಪಡೆದಿರುತ್ತಾರೆ. ಇದಕ್ಕೆ ಕುಲಸಚಿವ (ಪರೀಕ್ಷಾಂಗ)ರವರಾಗಲೀ ಅಥವಾ ವಿಶ್ವವಿದ್ಯಾನಿಲಯವಾಗಲೀ ಹೊಣೆಯಾಗುವುದಿಲ್ಲ ಎಂದು ತಿಳಿಸಿದರು. ಸ್ನಾತಕ ಹಾಗೂ ಸ್ನಾತಕೋತ್ತರದ ಎಲ್ಲಾ ವಿಷಯಗಳಿಗೂ UUCMS ಸಾಫ್ಟವೇರ್ ಒಂದೇ

ಆಗಿರುತ್ತದೆ. ಆದರೆ, UUCMS ಸಾಫ್ಟವೇರ್‌ನಲ್ಲಿ ಮರುಮೌಲ್ಯಮಾಪನಕ್ಕೆ ಆಯ್ಕೆ ಇರುವುದಿಲ್ಲ. ಈ ಸಂಬಂಧ ಪ್ರಾಂಶುಪಾಲರುಗಳ ಸಭೆಯಲ್ಲಿ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಅರ್ಜಿಯನ್ನು offline ನಲ್ಲಿಯೇ ನೀಡಬೇಕೆಂದು ತಿಳಿಸಿ, ಪರೀಕ್ಷೆಗಳು ಪ್ರಾರಂಭವಾಗಿದ್ದರೂ UUCMS ಸಾಫ್ಟವೇರ್ ಇನ್ನು ಕಾರ್ಯನಿರ್ವಹಿಸುತ್ತಿರಲಿಲ್ಲ. ಆ ಅವಧಿಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ manual ಆಗಿ ಮೌಲ್ಯಮಾಪನ ಮಾಡಿಸಿ ಫಲಿತಾಂಶ ಪ್ರಕಟಿಸಲಾಯಿತು. ತದನಂತರ ವಿದ್ಯಾರ್ಥಿಗಳು ಸಲ್ಲಿಸಿರುವ ಅರ್ಜಿಯನ್ನು ಸಹ ಪರಿಗಣಿಸಲಾಗಿದೆ ಎಂದು ಮಾಹಿತಿ ನೀಡಿದರು.

<u>ಪ್ರೊ. ಜಿ. ವೆಂಕಟೇಶ್ ಕುಮಾರ್‌ರವರು ಮಾತನಾಡಿ</u> –ಯುವರಾಜ ಕಾಲೇಜಿನಲ್ಲಿಯೇ ಸಾಕಷ್ಟು ಸಮಸ್ಯೆಗಳಾಗಿವೆ. ಮೂರನೇ ಸೆಮಿಸ್ಟರ್ ಅಥವಾ ನಾಲ್ಕನೇ ಸೆಮಿಸ್ಟರ್‌ನ ಅನೇಕ ವಿದ್ಯಾರ್ಥಿಗಳ $C_1$ ಮತ್ತು $C_2$ ಅಂಕಗಳನ್ನು ನಮೂದಿಸದಿರುವುದರಿಂದ ಕೆಲವು ವಿದ್ಯಾರ್ಥಿಗಳ ಫಲಿತಾಂಶ ಹಾಗೂ ಅಂಕಪಟ್ಟಿ ಮುದ್ರಣ ತಡವಾಗಿರುವುದು ಸಹ ವಿಶ್ವವಿದ್ಯಾನಿಲಯದ ಗಮನಕ್ಕೆ ಬಂದಿರುತ್ತದೆ ಎಂದು ತಿಳಿಸಿದರು.

<u>ಡಾ. ಚೈತ್ರ ನಾರಾಯಣ್‌ರವರು ಮಾತನಾಡಿ</u> – ಕಾನೂನು ಶಾಲೆಯಲ್ಲಿಯೂ ಸಹ ಇಂತಹ ಸಮಸ್ಯೆಯಿರುವುದು ಕಂಡುಬಂದಿದೆ. ಕಾನೂನು ಶಾಲೆಯ ಅಂತರಿಕ ಸಮಸ್ಯೆಯಿಂದ ಬಹಳಷ್ಟು ವಿದ್ಯಾರ್ಥಿಗಳಿಗೆ ತೊಂದರೆಯಾಗಿರುತ್ತದೆ. UUCMS ಸಾಫ್ಟವೇರ್ ವಿದ್ಯಾರ್ಥಿಗಳ ಮರುಮೌಲ್ಯಮಾಪನಕ್ಕೆ ಮಾತ್ರ ಸ್ಪಂದಿಸುವುದಿಲ್ಲ ಎಂದು ತಿಳಿಸಿದರು.

<u>ಶ್ರೀ ಎಂ.ಬಿ.ಗಪ್ಪಣ್ಣರವರು ಮಾತನಾಡಿ</u> – ನಿಗದಿತ ಅವಧಿಯೊಳಗೆ ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳ $C_1$ ಮತ್ತು $C_2$ ಅಂಕಗಳನ್ನು ಕಳುಹಿಸಬೇಕೆಂದು ಎಲ್ಲಾ ವಿಭಾಗ/ಕಾಲೇಜು/ಸಂಸ್ಥೆಗಳಿಗೆ ಸುತ್ತೋಲೆ ಹೊರಡಿಸಬೇಕು. ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ಅಂಕಪಟ್ಟಿ ಹಾಗೂ ಪದವಿ ಪ್ರಮಾಣಪತ್ರ ನೀಡುವಲ್ಲಿ ತಡವಾಗಬಾರದು. ತಡವಾದರೆ ಮುಂದಿನ ಉನ್ನತ ಶಿಕ್ಷಣಕ್ಕೆ ಅಥವಾ ಉದ್ಯೋಗಕ್ಕೆ ತೊಂದರೆಯಾಗುತ್ತದೆ ಎಂದು ತಿಳಿಸಿದರು.

3. ಪ್ರೊ. ಜಿ. ವೆಂಕಟೇಶ್ ಕುಮಾರ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ ದತ್ತಿ ಹಾಗೂ ಚಿನ್ನದ ಪದಕವನ್ನು ಪ್ರದಾನ ಮಾಡುವಾಗ 3-4 ವಿದ್ಯಾರ್ಥಿಗಳ ಗ್ರೇಡ್ ಒಂದೇಯಾಗಿದ್ದಾಗ, ಅಂಕಗಳನ್ನು ಪರಿಗಣಿಸಬೇಕು. ಅಂಕಗಳು ಸಹ ಒಂದೇಯಾಗಿರುವಾಗ, ಸೆಮಿಸ್ಟರ್ ಪರಿಗಣಿಸಬೇಕೆಂದು ಸಲಹೆ ನೀಡಿದರು ಹಾಗೂ ಮನೋವಿಜ್ಞಾನ ಅಧ್ಯಯನ ವಿಭಾಗದಲ್ಲಿ ಪ್ರಸ್ತುತ ಎಂಟು ಚಿನ್ನದ ಪದಕಗಳಿದ್ದು, ಎಲ್ಲಾ ಪದಕಗಳನ್ನು ಇಂಗ್ಲೀಷ್ ಮಾಧ್ಯಮದವರಿಗೆ ನೀಡಲಾಗುತ್ತದೆ. ನಮ್ಮ ರಾಜ್ಯದಲ್ಲಿ ಕನ್ನಡಕ್ಕೆ ಆದ್ಯತೆ ನೀಡಿರುವುದರಿಂದ ಹಾಗೂ ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆಯಲು ಪ್ರೋತ್ಸಾಹ ನೀಡುವ ಉದ್ದೇಶದಿಂದ ತಮ್ಮ ಹೆಸರಿನಲ್ಲಿ ಸ್ಥಾಪಿಸಲಾಗಿರುವ ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆದು, ಅತೀ ಹೆಚ್ಚು ಅಂಕ ಪಡೆಯುವ ವಿದ್ಯಾರ್ಥಿಗೆ ಮಾತ್ರ ನಗದು ಬಹುಮಾನವನ್ನು ನೀಡಬೇಕು. ಈ ಸಂಬಂಧ ವಿಭಾಗದಿಂದ ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆದವರ ಪಟ್ಟಿಯನ್ನು ಪಡೆಯಬೇಕಾಗುತ್ತದೆ. 103ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆದಿರುವ ಹಾಗೂ ಅತೀ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳ ಸಿದ್ಧಪಡಿಸಲಾಗಿರುವ ಪಟ್ಟಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲಾಗುವುದೆಂದು ತಿಳಿಸಿದರು.

4. ಶ್ರೀ ಎಂ.ಬಿ. ಗಪ್ಪಣ್ಣರವರು ಮಾತನಾಡಿ, ಸಿಂಡಿಕೇಟ್‌ನಲ್ಲಿ ತೆಗೆದುಕೊಂಡ ತೀರ್ಮಾನವೇ ಅಂತಿಮವಾಗಿದ್ದು, ಇವುಗಳನ್ನು ಜಾರಿಗೆ ತರಬೇಕಾಗುತ್ತದೆಂದು ತಿಳಿಸಿದರಲ್ಲದೇ ಸರ್ಕಾರದಿಂದ ಬರುವ ನಿಧಿಯನ್ನು ತ್ವರಿತಗತಿಯಲ್ಲಿ ತರಿಸಿಕೊಳ್ಳಬೇಕೆಂದು ಸಭೆಗೆ ತಿಳಿಸಿದರು.

5. ಮಾನ್ಯ ಕುಲಪತಿಗಳು ಮಾತನಾಡಿ ಹೆಚ್ಚಿನ ಪ್ರಾಜೆಕ್ಟ್‌ಗಳನ್ನು ತರಲು ಪ್ರಸ್ತಾವನೆಗಳನ್ನು ಅನುದಾನಿತ ಸಂಸ್ಥೆಗಳಿಗೆ ಸಲ್ಲಿಸಬೇಕಾಗುತ್ತದೆ ಎಂದು ಹಾಗೂ ರೆವಿನ್ಯೂ ಬರುವಂತಹ ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸುವುದು ಸೂಕ್ತ ಎಂದು ಸಲಹೆ ನೀಡಿದರು.

6. ಪ್ರೊ. ಜಿ. ವೆಂಕಟೇಶ್ ಕುಮಾರ್ ರವರು ಮಾತನಾಡಿ: ಶ್ರೀ ಗಪ್ಪಣ್ಣನವರ ಪ್ರಕಾರ Firstly according to Sri. Gappanna Syndicate functions according to the Act. Secondly, whatever possible decisions taken that is to be retained within the framework of Syndicate as provided beyond this if there is any other thing than to approach Government.

7. ಕುಲಸಚಿವರು ಮಾತನಾಡಿ ದಿನಾಂಕ 16-02-2023ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಇತರೆ ವಿಷಯಕ್ರಮ ಸಂಖ್ಯೆ: ಎರಡಕ್ಕೆ ಸಂಬಂಧಿಸಿದಂತೆ, ಕುಲಪತಿಗಳು, ಪ್ರಸ್ತುತ ನೀಡಿರುವ ಆದೇಶವನ್ನು ಹಿಂಪಡೆದು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದಿರುವುದರಿಂದ ಪದನಾಮ ಬದಲಾವಣೆ ಮಾಡಿರುವ ಯಥಾಸ್ಥಿತಿಯ ಆದೇಶವನ್ನೇ ನೀಡಲು ಸಮ್ಮತಿಸಿದರು. ಕುಲಸಚಿವ (ಪರೀಕ್ಷಾಂಗ) ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯು ಪದನಾಮ ಬದಲಾವಣೆಯ ಸಂಬಂಧ ವ್ಯತಿರಿಕ್ತವಾಗಿ ವರದಿ ಸಲ್ಲಿಸಿದ್ದಲ್ಲಿ ನಂತರ ಪರಿಷ್ಕೃತ ಆದೇಶ ಹೊರಡಿಸುವುದರ ಬಗೆಗೆ ಕ್ರಮವಹಿಸಬಹುದಾಗಿದೆಯೆಂದು ಸಭೆಗೆ ತಿಳಿಸಿದರು. ವಿಶ್ವವಿದ್ಯಾನಿಲಯವು ಇತರೆ ವಿಷಯ ಸಂಖ್ಯೆ ಎರಡಕ್ಕೆ ಸೇರ್ಪಡೆ ಮಾಡಿರುವುದನ್ನು ಎಲ್ಲಾ ಮಾನ್ಯ ಸಿಂಡಿಕೇಟ್ ಸದಸ್ಯರ ಗಮನಕ್ಕೆ ತರುತ್ತಾ, ಈ ಸೇರ್ಪಡೆಯನ್ನು, ಮುಂದೆ ನಡೆಯುವ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ದೃಢೀಕರಣಕ್ಕಾಗಿ ಮಂಡಿಸಲಾಗುವುದೆಂದು ಎಂದು ಸಭೆಗೆ ತಿಳಿಸಿದರು.

8. ಮಾನ್ಯ ಕುಲಪತಿಗಳು ಮಾತನಾಡಿ ಪದನಾಮಕ್ಕೆ ಸಂಬಂಧಿಸಿದಂತೆ ಪ್ರಸ್ತುತ 54 ಉದ್ಯೋಗಿಗಳು ಬದಲಾವಣೆಯನ್ನು ಕೋರಿರುತ್ತಾರೆ, ನಂತರ ಇನ್ನು ಮುಂಬರುವ ದಿವಸಗಳಲ್ಲಿ ಹೆಚ್ಚಿನ ಉದ್ಯೋಗಿಗಳು ಬದಲಾವಣೆ ಕೋರಬಹುದು ಹಾಗೂ ಪದನಾಮಕ್ಕೆ ತಕ್ಕಂತೆ ವೇತನವನ್ನು ಸಹ ಮುಂಬರುವ ದಿನಗಳಲ್ಲಿ ಕೋರಬಹುದು ಆದುದರಿಂದ ಪದನಾಮ ಬದಲಾವಣೆ ಮಾಡುವುದು ಸೂಕ್ತವಲ್ಲ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

9. ಪ್ರೊ. ಜಿ. ವೆಂಕಟೇಶ್ ಕುಮಾರ್‌ರವರು ಮಾತನಾಡಿ, ಹಿಂದಿನ ಹಂಗಾಮಿ ಕುಲಪತಿಗಳ ಅವಧಿ ಮುಗಿಯುವ ಮುನ್ನ ನಡೆದ ಸಭೆಯಲ್ಲಿ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳಬಾರದೆಂದು ತೀರ್ಮಾನವಾಗಿದ್ದರೂ ಹಲವು ನಿರ್ಧಾರಗಳನ್ನು ಮಾಡಲಾಗಿದೆ. ಹಾಗೂ ಈಗಾಗಲೇ ಹಿಂದಿನ ಕುಲಪತಿಗಳು ತೆಗೆದುಕೊಂಡಿರುವ ನೀತಿ ನಿರ್ಧಾರಗಳನ್ನು ಪರಿಶೀಲಿಸಲು ಸಮಿತಿಯನ್ನು ರಚಿಸಿರುವುದರಿಂದ ಸಮಿತಿ ವರದಿ ಸಲ್ಲಿಸಿದ ನಂತರ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವುದು ಸೂಕ್ತ ಎಂದು ಸಭೆಗೆ ತಿಳಿಸಿದರು.

10. ಸಿಂಡಿಕೇಟ್ ಸದಸ್ಯರಾದ ಶ್ರೀ ಗಪ್ಪಣ್ಣ, ಡಾ. ಚೈತ್ರ ನಾರಾಯಣ್‌ರವರು ಮಾತನಾಡಿ ಈಗಾಗಲೇ "ಕುಲಪತಿಗಳ ಅಧಿಕಾರ ಅವಧಿಯ 02 ತಿಂಗಳೊಳಗೆ ಕೊನೆಗೊಂಡರೆ, ಯಾವುದೇ ಪ್ರಮುಖ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಕರ್ನಾಟಕದ ವಿಶ್ವವಿದ್ಯಾನಿಲಯಗಳ ಕುಲಪತಿಗಳಿಗೆ ನಿರ್ದೇಶಿಸಲಾಗಿದೆ. ಯಾವುದೇ ಸನ್ನಿಹಿತ ಪ್ರಮುಖ ನೀತಿ ನಿರ್ಧಾರಗಳ ಅಗತ್ಯವಿದ್ದಲ್ಲಿ, ಪೂರ್ವಾನುಮತಿಯನ್ನು ಏಕರೂಪವಾಗಿ ಪಡೆಯಬೇಕು" ಎಂದು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ ಸಮಿತಿಯ ವರದಿ ಬಂದ ನಂತರ ನಿರ್ಣಯ ತೆಗೆದುಕೊಳ್ಳುವುದು ಸೂಕ್ತ ಎಂದು ಸಭೆಗೆ ತಿಳಿಸಿದರು.

11. ಮಾನ್ಯ ಕುಲಪತಿಗಳು ಮಾತನಾಡಿ ಈಗಾಗಲೇ ರಚಿಸಿರುವ ಸಮಿತಿಗೆ ಕಾನೂನು ನಿಕಾಯದ ಡೀನರು ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನದ ನಿಕಾಯದ ಡೀನರನ್ನು ಸೇರ್ಪಡೆ ಮಾಡಬೇಕೆಂದು ತಿಳಿಸಿದರು. ಹಾಗೂ ಸಮಿತಿ ರಚನೆಯಾಗಿರುವುದರಿಂದ ಈ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸುವುದು ಬೇಡ ಎಂದು ಸಭೆಗೆ ತಿಳಿಸಿದರು ಹಾಗೂ ಸಮಿತಿಯು ಶೀಘ್ರದಲ್ಲಿ ವರದಿಯನ್ನು ಸಲ್ಲಿಸಲು ಸೂಚಿಸಿದರು.

12. ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಮಾನ್ಯ ಕುಲಪತಿಗಳ ಅಧಿಕಾರ ಅವಧಿಯು 02 ತಿಂಗಳೊಳಗೆ ಕೊನೆಗೊಂಡರೆ, ಯಾವುದೇ ಪ್ರಮುಖ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಕರ್ನಾಟಕದ ವಿಶ್ವವಿದ್ಯಾನಿಲಯಗಳ ಕುಲಪತಿಗಳಿಗೆ ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಅಂದರೆ ನವೆಂಬರ್ ಮಾಹೆಯ 2 ತಿಂಗಳ ಮುಂಚಿತವಾಗಿ ತೆಗೆದುಕೊಂಡ ನಿರ್ಣಯಗಳನ್ನು ಮತ್ತೊಮ್ಮೆ ಪರಿಶೀಲಿಸಬೇಕು ಎಂದು ದಿನಾಂಕ 3-2-2023ರ ಸಿಂಡಿಕೇಟ್‌ನಲ್ಲಿ ತಿರ್ಮಾನವಾಗಿದ್ದು (ಪದನಾಮ, ವೇತನ, ಹಣಕಾಸು, ಸಂಯೋಜಕರ ನೇಮಕ ಹಾಗೂ ಇತರೆ ಪ್ರಮುಖ ನೀತಿ ನಿರ್ಧಾರಗಳು) ಇದಕ್ಕೆ ಆದೇಶಗಳನ್ನು ಪರಿಶೀಲಿಸಲು ಸಭೆಯಲ್ಲಿ ಸಮಿತಿಯನ್ನು ರಚಿಸಲಾಯಿತು ಆದರೆ ತಮಗೆ ಬಂದಿರುವ ಪತ್ರದಲ್ಲಿ ಪದನಾಮ ಬದಲಾವಣೆ ವಿಷಯ ಮಾತ್ರ ಪ್ರಸ್ತಾಪಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

13. ಪ್ರೊ. ಜಿ. ವೆಂಕಟೇಶ್ ಕುಮಾರ್‌ರವರು ಪದನಾಮ ಬದಲಾವಣೆ ಏನು ಎಂಬ ವಿಷಯಕ್ಕೆ ಉತ್ತರಿಸಿದ ಕುಲಸಚಿವರು ಉದಾಹರಣೆ ಪರಿಚಾರಕನಿಗೆ ಟಿ.ಸಿ.ಸಿ.ಯಾಗಿ, ತಾಂತ್ರಿಕ ಸಿಬ್ಬಂದಿಗೆ ಜೂನಿಯರ್ ಇಂಜಿನಿಯರಾಗಿ ಈ ರೀತಿ ಇನ್ನು ಹಲವು ಹುದ್ದೆಗಳನ್ನು ಬದಲಾವಣೆ ಮಾಡಲು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಸುದೀರ್ಘವಾಗಿ ಈ ವಿಷಯವನ್ನು ಚರ್ಚಿಸಲಾಯಿತು ಹಿಂದೆ ನೀಡಿರುವ ಆದೇಶವನ್ನು ಹಿಂಪಡೆದು ಪದನಾಮ ಬದಲಾವಣೆ ಆದೇಶವನ್ನು ನೀಡಲು ತೀರ್ಮಾನಿಸಲಾಯಿತು ಹಾಗೂ ವೇತನದಲ್ಲಿ ಮಾತ್ರ ಯಾವುದೇ ವ್ಯತ್ಯಾಸ ಇರುವುದಿಲ್ಲ. ಅವರು ಹಿಂದೆ ಇದ್ದ ಹುದ್ದೆಯಲ್ಲಿ ಪಡೆಯುತಿದ್ದ ವೇತನವನ್ನೇ ನೀಡುವುದು ಎಂದು ತೀರ್ಮಾನಿಸಲಾಯಿತು. ಇದಕ್ಕೆ ಎಲ್ಲಾ ಸಿಂಡಿಕೇಟ್ ಸದಸ್ಯರು ಕೂಡ ಒಪ್ಪಿರುವುದಾಗಿ ತಿಳಿಸಿದರು.

14. ದಿನಾಂಕ 3-2-2023ರಂದು ನಡೆದ ಸಿಂಡಿಕೇಟ್ ಸಭೆಯ ವಿಷಯ 1.31/2023ರ ತೀರ್ಮಾನಕ್ಕೆ ತಿದ್ದುಪಡಿ ಮಾಡಿ ಪಿಹೆಚ್.ಡಿ 2010ರ ನಿಯಮಾವಳಿಯ ಪ್ರಕಾರ ವಿವಿಧ ವಿಷಯಗಳ ಮಾರ್ಗದರ್ಶಕರ ಬಳಿ ಸಂಶೋಧನಾ ಕಾರ್ಯವನ್ನು ನಿರ್ವಹಿಸುತ್ತಿದ್ದ 18 ಸಂಶೋಧನಾ ವಿದ್ಯಾರ್ಥಿಗಳಿಗೆ ದಿನಾಂಕ 31-12-2022ರೊಳಗೆ ಕಾರಣಾಂತರಗಳಿಂದ ಮಹಾಪ್ರಬಂಧವನ್ನು ಸಲ್ಲಿಸಿರುವುದಿಲ್ಲ. ಈ ಸಂಬಂಧ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಒಂದು ಭಾರಿ ಮಾತ್ರ ರೂ. 50,000/- (ರೂ. ಐವತ್ತು ಸಾವಿರ ರೂಪಾಯಿಗಳು ಮಾತ್ರ)ಗಳ ವಿಶೇಷ ದಂಡ ಶುಲ್ಕದೊಂದಿಗೆ ದಿನಾಂಕ 01-01-2023ರಿಂದ ಅನ್ವಯವಾಗುವಂತೆ ಆರು ತಿಂಗಳುಗಳ ಕಾಲಾವಕಾಶವನ್ನು ಮಾತ್ರ ವಿಸ್ತರಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.

15. ಪ್ರೊ. ಜಿ. ವೆಂಕಟೇಶ್ ಕುಮಾರ್ ರವರು ಮಾತನಾಡಿ ಮಹಿಳಾ ಸಂಶೋಧನಾ ವಿದ್ಯಾರ್ಥಿಗಳಿಗೆ 10 ವರ್ಷದವರೆಗೆ ಮಹಾಪ್ರಬಂಧವನ್ನು ಸಲ್ಲಿಸಲು ಯು.ಜಿ.ಸಿ. ನಿಯಮಾವಳಿಯ ಪ್ರಕಾರ ಅವಕಾಶವಿರುತ್ತದೆ ಇದನ್ನು ಯಾಕೆ ಪರಿಗಣಿಸುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. ಇನ್ನು ಮುಂದೆ ಯಾರೇ ಮಹಿಳಾ ಸಂಶೋಧನಾ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದಲ್ಲಿ ಅದನ್ನು ಪರಿಗಣಿಸಬೇಕಾಗಿ ತಿಳಿಸಿದರು.

16. ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ ಪಿಹೆಚ್.ಡಿ ನಿಯಮಾವಳಿಯನ್ನು ಮಾರ್ಪಾಡು ಮಾಡುವ ಸಂಬಂಧ ಎಲ್ಲಾ ಡೀನ್‌ಗಳನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಲಾಗಿತ್ತು. ಪಿಹೆಚ್.ಡಿ. ನಿಯಮಾವಳಿಯಲ್ಲಿ ಮಾರ್ಪಾಡುಗಳನ್ನು ಮಾಡಿ ಕುಲಸಚಿವರ ಕಛೇರಿಗೆ ಕಳುಹಿಸಲಾಗಿದೆ. ಅಲ್ಲಿಂದ ಅಧಿಸೂಚನೆ ಬಂದ ನಂತರ ಪ್ರೊ. ವೆಂಕಟೇಶ್‌ಕುಮಾರ ಅವರ ಸಲಹೆಯು ಒಳಗೊಂಡಿದ್ದಲ್ಲಿ ಅದನ್ನು ಇನ್ನು ಮುಂದೆ ಪರಿಗಣಿಸಲಾಗುವುದೆಂದು ಸಭೆಗೆ ತಿಳಿಸಿದರು. ಹಾಗೂ ಪ್ರಾಧ್ಯಾಪಕರುಗಳಿಗೆ ಸಂಭಾವನೆ ನೀಡುವ ವಿಚಾರವನ್ನು ಸಹ ಪ್ರಸ್ತಾಪಿಸಿರುವುದಾಗಿ ತಿಳಿಸಿದರು.

17. ಡಾ. ಚೈತ್ರ ನಾರಾಯಣರವರು ಮಾತನಾಡಿ ಪಿಹೆಚ್.ಡಿ ನಿಯಮಾವಳಿಯನ್ನು ಮಾರ್ಪಾಡು ಮಾಡುವುದನ್ನು ಸಿಂಡಿಕೇಟ್ ಗಮನಕ್ಕೆ ತರಬೇಕೆಂದು ಕುಲಸಚಿವ(ಪರೀಕ್ಷಾಂಗ)ರವರಿಗೆ ಕೋರಿದರು.

18. ಶ್ರೀ ಗಪ್ಪಣ್ಣರವರು ಮಾತನಾಡಿ Molecular Biology ವಿಭಾಗದಲ್ಲಿ ಅತಿಥಿ ಉಪನ್ಯಾಸಕರನ್ನು ವಿಭಾಗದ ಅಧ್ಯಕ್ಷರು ವರದಿ ಮಾಡಿಕೊಳ್ಳಲು ಅವಕಾಶ ಕೊಡದೆ ನೀವು ಪ್ರಾಣಿಶಾಸ್ತ್ರದಲ್ಲಿ ಪರಿಣಿತರು ಅಲ್ಲಿ ಹೋಗಿ ವರದಿ ಮಾಡಿಕೊಳ್ಳಲು ಅವಕಾಶ ಇದೆ ಎಂದು ವಾಪಸ್ಸು ಕಳುಹಿಸಿರುವುದಾಗಿ ಸಭೆಯ ಗಮನಕ್ಕೆ ತಂದರು.

19. ಡಾ.ಚೈತ್ರ ನಾರಾಯಣ್‌ರವರು ಮಾತನಾಡಿ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದಲ್ಲಿ ಕೂಡ ಅದೇ ಪರಿಸ್ಥಿತಿ ಉದ್ಭವವಾಗಿದ್ದು, ಕಿರಣ್‌ಕುಮಾರ್ ಮತ್ತು ಷಣ್ಮುಖ ಎಂಬ ಐ.ಓ.ಇ ಸಿಬ್ಬಂದಿಗಳಿಗೆ 5 ತಿಂಗಳಿಂದ ವೇತನ ಪಾವತಿಯಾಗದೆ ಇರುವುದನ್ನು ಸಭೆಯ ಗಮನಕ್ಕೆ ತಂದರು.

20. ಮಾನ್ಯ ಕುಲಪತಿಯವರು ಮಾತನಾಡಿ Molecular Biology ಮತ್ತು ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಅಧ್ಯಕ್ಷರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು ಹಾಗೂ ಡಾ. ರಫತುನ್ನೀಸ ಬೇಗಂ ಉರ್ದು ವಿಭಾಗದಲ್ಲಿ ಈಗಾಗಲೇ 4 ಬಾರಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುವುದರಿಂದ ಅವರನ್ನು ಮತ್ತೆ ಶಿಫಾರಸ್ಸು ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದರು.

21. ಮಾನ್ಯ ಕುಲಪತಿಯವರು ಮಾತನಾಡಿ ಇನ್ನು ಮುಂದೆ ಅತಿಥಿ ಉಪನ್ಯಾಸಕರಿಗೆ ಮತ್ತು ತಾತ್ಕಾಲಿಕ ಉದ್ಯೋಗಿಗಳಿಗೆ ಪ್ರತಿ ತಿಂಗಳ 5ನೇ ತಾರೀಖಿನೊಳಗೆ ವೇತನವನ್ನು ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಹಣಕಾಸು ಅಧಿಕಾರಿಯವರಿಗೆ ಸೂಚಿಸಿದರು.

22. ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ ಐ.ಓ.ಇ ನಲ್ಲಿ 17 ಸಿಬ್ಬಂದಿಗಳು ಇದ್ದು 5 ಜನ ಹೊರತುಪಡಿಸಿ ಉಳಿದ ಸಿಬ್ಬಂದಿಗೆ ಜಿ.ಆರ್.ಎ. ಖಾತೆಯಿಂದ ವೇತನವನ್ನು ಪಾವತಿಸಬೇಕೆಂದು ತೀರ್ಮಾನವಾಗಿತ್ತು. ಈ ಐದು ಸಿಬ್ಬಂದಿಗಳಲ್ಲಿ ಒಬ್ಬರು ಪ್ರಧಾನ ವಿಜ್ಞಾನಿ ಮತ್ತೊಬ್ಬರು ವಿಜ್ಞಾನಿ ಇವರಿಗೆ ಹೆಚ್ಚುವರಿ ವೇತನ ಇರುವುದರಿಂದ ಅವರಿಗೆ ವೇತನವನ್ನು ಪಾವತಿಸಿರುವುದಿಲ್ಲ. ಪ್ರಾಜೆಕ್ಟ್ ಮುಗಿದ ನಂತರ ಇವರನ್ನು ಕೆಲಸದಿಂದ ಬಿಡುಗಡೆಗೊಳಿಸಿರುವುದಿಲ್ಲ. ಹಾಗೂ ಇವರಿಗೆ ಬೇರೆ ಯಾವ ಕೆಲಸವನ್ನು ನಿಯೋಜಿಸಿರುವುದಿಲ್ಲ. ಈ ಐದು ಸಿಬ್ಬಂದಿಯವರಿಗೆ ಐ.ಓ.ಇ.ಯ ಸಂಪನ್ಮೂಲದಿಂದ ವೇತನವನ್ನು ಭರಿಸತಕ್ಕದು. ಐ.ಓ.ಇ.ಯಿಂದ ಬರುವ ಆದಾಯ ರೂ. 8 ರಿಂದ ರೂ. 10 ಲಕ್ಷವಾಗಿದ್ದು ಈ ಐದು ಜನಕ್ಕೆ ನೀಡುವ ವೇತನವು ರೂ. 35 ಲಕ್ಷವಾಗಿದ್ದು, ಆದಾಯವು ಕಡಿಮೆ ಇರುವುದರಿಂದ ವೇತನವನ್ನು ಪಾವತಿಸಿರುವುದಿಲ್ಲ ಎಂದು ಸಭೆಗೆ ತಿಳಿಸಿದರು.

23. ಹಣಕಾಸು ಅಧಿಕಾರಿಯವರು ಮಾತನಾಡಿ ಈಗಾಗಲೇ ಲೆಕ್ಕಪರಿಶೋಧಕರಿಂದ ಆಕ್ಷೇಪಣೆ ಬಂದಿದ್ದು ಇವರಿಗೆ ಎಸ್.ಪಿ.ಎಸ್. ನಿಂದ ಹಣ ವರ್ಗಾವಣೆ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದರು.

24. ಕುಲಸಚಿವ (ಪರೀಕ್ಷಾಂಗ) ನವರು ಮಾತನಾಡಿ ತಾವು ಐ.ಓ.ಇ ಸಂಯೋಜಕರಾಗಿ ಅಧಿಕಾರ ವಹಿಸಿಕೊಂಡಿರುವುದನ್ನು ಸಭೆಯ ಗಮನಕ್ಕೆ ತರುತ್ತಾ, ಮಾನ್ಯ ಕುಲಪತಿಗಳಿಗೆ ಹಾಗೂ ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ ಧನ್ಯವಾದಗಳನ್ನು ತಿಳಿಸಿದರು. ಐ.ಓ.ಇ ನಿಧಿಯಾಗಿರುವುದರಿಂದ ಐ.ಓ.ಇ ಕಟ್ಟಡ ಎಂದು ಕರೆಯಲಾಗಿದೆ. ಐ.ಓ.ಇ ಪ್ರಾಜೆಕ್ಟ್ ಮುಗಿದ ನಂತರ ಸಿ.ಪಿ.ಡಿ.ಪಿ.ಎಸ್, ಯು.ಪಿ.ಇ ಇನ್ನು ಇತರೆ ಪ್ರಾಜೆಕ್ಟ್‌ನ ಉಪಕರಣಗಳನ್ನು ಒಂದೇ ಕಟ್ಟಡದಲ್ಲಿ ಇಟ್ಟು ಅದನ್ನು ವಿಜ್ಞಾನ ಭವನ ಎಂದು ಪುನರ್ ಹೆಸರನ್ನು ಇಡಲಾಯಿತು. ವಿಶ್ವವಿದ್ಯಾನಿಲಯದಿಂದ 160 ಕೋಟಿ ಬಂದಿದೆ. 80 ಕೋಟಿಯಷ್ಟು ಉಪಕರಣವಿದ್ದು ಅದನ್ನು ದುರಸ್ತಿ ಮಾಡಲು ನಿಧಿ ಇರುವುದಿಲ್ಲ. 70% ರಷ್ಟು ಉಪಕರಣವನ್ನು ದುರಸ್ತಿ ಹಾಗೂ ಕಾರ್ಯನಿರ್ವಹಿಸಲು ಸಿಬ್ಬಂದಿಗಳಿಲ್ಲ. ಈ ವಿಷಯವನ್ನು ಮಾನ್ಯ ಕುಲಪತಿ ಮತ್ತು ಹಣಕಾಸು ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಸಣ್ಣ ದುರಸ್ತಿಗಾಗಿ 60 ಲಕ್ಷದಷ್ಟು ಕೋರಲಾಗಿದೆ. ಬಜೆಟ್ ಕೊರತೆಯಿಂದ ಹಣವನ್ನು ನೀಡಲು ಸಾಧ್ಯವಿಲ್ಲ ಎಂದು ತಿಳಿಸಿರುವುದಾಗಿ ಸಭೆಗೆ ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಒಂದು ಸಮಿತಿಯನ್ನು ರಚಿಸಿ ವಿಜ್ಞಾನ ಭವನವನ್ನು ಹೇಗೆ ನವೀಕರಿಸಬೇಕೆಂದು ಸಮಿತಿಯಲ್ಲಿ ನಿರ್ಧಾರ ತೆಗೆದುಕೊಳ್ಳುವುದು ಸೂಕ್ತ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

25. ಡಾ. ಚೈತ್ರ ನಾರಾಯಣ್‌ರವರು ಮಾತನಾಡಿ 8 ಮಂದಿ ಪಿಹೆಚ್.ಡಿ ಹೊಂದಿರುವವರಿಗೆ ವೇತನವನ್ನು ಹೆಚ್ಚಿಸಿರುವುದಿಲ್ಲ ಅವರು Research Publication ಮಾಡಿದರೆ ಮಾತ್ರ ಅವರಿಗೆ ವೇತನವನ್ನು ಬಿಡುಗಡೆ ಮಾಡಲಾಗುತ್ತದೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು ಮತ್ತು ಓ.ಬಿ.ಸಿ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಸರಿಯಾದ ಸಮಯದಲ್ಲಿ ನೀಡದೆ ಇರುವುದಕ್ಕೆ ಆಕ್ಷೇಪವನ್ನು ವ್ಯಕ್ತಪಡಿಸಿದರು.

26. ಮಾನ್ಯ ಕುಲಪತಿಗಳು ಮಾತನಾಡಿ ಇನ್ನು ಮುಂದೆ ಎಲ್ಲಾ ವಿದ್ಯಾರ್ಥಿಗಳ ಶಿಷ್ಯವೇತನವನ್ನು ಪ್ರತಿ ತಿಂಗಳ 5ನೇ ತಾರೀಖಿನೊಳಗೆ ನೀಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಹಣಕಾಸು ಅಧಿಕಾರಿಯವರಿಗೆ ಸೂಚಿಸಿದರು.

27. ಶ್ರೀ ಗಪ್ಪಣ್ಣನವರು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಕುಕ್ಕರಹಳ್ಳಿ ಕೆರೆಯ ಮೀನು ಪಾಶುವಾರು 10 ವರ್ಷದಿಂದ ಗುತ್ತಿಗೆ ಹಕ್ಕನ್ನು ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾ ಮಂಡಳಿ (ನಿ) ಮೈಸೂರು ಇವರಿಗೆ ಗುತ್ತಿಗೆಯನ್ನು ನೀಡಲಾಗಿದ್ದು ಅದರ ಅವಧಿಯು ಮುಗಿದಿರುತ್ತದೆ. ಕೋವಿಡ್-19 ಕಾರಣದಿಂದಾಗಿ ಲಾಕ್‌ಡೌನ್ ವಿಧಿಸಿದ್ದರಿಂದ ಮೀನುಗಾರಿಕೆ ನಡೆಸಲು ಗುತ್ತಿಗೆದಾರರಿಗೆ ಕಳೆದ ಎರಡು ವರ್ಷದಿಂದ ಸಾಧ್ಯವಾಗಿಲ್ಲ. ಈ ವಿಷಯವನ್ನು ಮೊದಲನೇ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲಾಗಿದೆ. ಪುನಃ ಅದರ ಬಗ್ಗೆ ತನಿಖೆ ಅಥವಾ ಪರಿಶೀಲಿಸುವುದು ಸೂಕ್ತವಲ್ಲ. ಇದರಿಂದ ನಮಗೆ ಪ್ರತಿ ವರ್ಷರೂ. 8.50 ಲಕ್ಷ ಆದಾಯ ಬರುತ್ತದೆ ಎಂದು ಸಭೆಗೆ ತಿಳಿಸಿದರು. ಹಾಗೂ ಈಗಾಗಲೇ 2 ವರ್ಷದಿಂದ ಸಾಕಷ್ಟು ನಷ್ಟವಾಗಿರುವುದನ್ನು ಸಭೆಯ ಗಮನಕ್ಕೆ ತಂದರು.

ಶ್ರೀಮತಿ ಪವಿತ್ರ ವೈ.ಕೆ. ಅವರು ಮಾತನಾಡಿ ಈ ಸಂಬಂಧ 12 ಲಕ್ಷ ರೂಗಳಿಗೆ ಗುತ್ತಿಗೆ ಹಕ್ಕನ್ನು ಪಡೆಯಲು ಸಿದ್ಧರಿರುವುದಾಗಿ ಮೈಸೂರು ರೈತ ಮೀನುಗಾರರ ಉತ್ಪಾದಕ ನಿಗಮ ನಿಯಮಿತರವರು ಪತ್ರ ನೀಡಿರುವುದಾಗಿ ಸಭೆಯ ಗಮನಕ್ಕೆ ತಂದರು.

ಡಾ. ಚೈತ್ರನಾರಾಯಣನವರು ಮಾತನಾಡಿ ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾ ಮಂಡಳಿ (ನಿ) ಮೈಸೂರು ಇವರು ಸಹ ಮೀನನ್ನು ತೆಗೆದುಕೊಳ್ಳುತ್ತಾ ಇಲ್ಲಾ, ಅಂದರೆ ಬೇರೆ ಏನೋ ನಡೆಯುತ್ತಿದೆ ಎಂದು ಅರ್ಥ, ಮೊದಲು ಇವರಿಗೆ ಟೆಂಡರ್ ಕೊಟ್ಟು ಮುಂದಿನ ನಿರ್ಣಯ ತೆಗೆದುಕೊಳ್ಳುವುದು ಸೂಕ್ತ ಹಾಗೂ ಈಗಾಗಲೇ ರೂ. 27 ಲಕ್ಷದಷ್ಟು ನಷ್ಟವಾಗಿರುವುದನ್ನು ಸಭೆಯ ಗಮನಕ್ಕೆ ತಂದರು.

ಮೇಲಿನ ಎಲ್ಲಾ ಸದಸ್ಯರುಗಳ ಅಭಿಪ್ರಾಯಗಳನ್ನು ಒಟ್ಟಾರೆಯಾಗಿ ಗಮನಿಸಿ ಮೀನುಗಾರಿಕೆಗೆ ಕುಕ್ಕರಹಳ್ಳಿ ಕೆರೆಯನ್ನು ಗುತ್ತಿಗೆ ಹಕ್ಕು ನೀಡುವುದರ ಬಗ್ಗೆ ಮತ್ತೊಮ್ಮೆ ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ಅದರಂತೆ ನಿಯಮಾನುಸಾರ ಮುಂದಿನ ಪ್ರಕ್ರಿಯೆ ಕೈಗೊಳ್ಳುವುದಾಗಿ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ಮಾನ್ಯ ಕುಲಸಚಿವರು ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ** **ಕುಲಪತಿಗಳು (ಪ್ರಭಾರ) ಮತ್ತು ಅಧ್ಯಕ್ಷರು**